**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ. ನಂ. 317/2020**

ಸಿಡಬ್ಲ್ಯೂ -1
ಪಿಡಬ್ಲೂ - 1

**ಸಾಕ್ಷಿದಾರರ ಹೆಸರು** : ಜೆಬಾನಾಜ ಉಸಮಾನ ನದಾಪ

**ಸಾಕ್ಷಿದಾರರ ವಯಸ್ಸು** : 31 ವರ್ಷ

**ಸಾಕ್ಷಿದಾರರ ಉದ್ಯೋಗ** : ಗೃಹಿಣಿ

**ಸಾಕ್ಷಿದಾರರ ವಿಳಾಸ** : ಸೊಲ್ಲಾಪುರ

---

**ಪ್ರಮಾಣ ವಚನ ಮಾಡಿದ ದಿನಾಂಕ : 29.07.2024**

ಸಾಕ್ಷಿಗೆ ಹಿಂದಿ ಭಾಷೆ ಬರುತ್ತಿದ್ದು, ಆರೋಪಿ ಪರ ವಕೀಲರು ಹಾಗೂ ಎ ಪಿ ಪಿ ರವರಿಗೆ ಹಿಂದಿ ಭಾಷೆ ಬರದ ಕಾರಣ ಶ್ರೀ ಎಂ ಎಸ್ ಬಿ ವಕೀಲರನ್ನು ತರ್ಜುದಾರರನ್ನಾಗಿ ನೇಮಿಸಲಾಯಿತು.

**ಮುಖ್ಯ ವಿಚಾರಣೆ : ಎಪಿಪಿ ಅವರಿಂದ**

1. ಸಿಡಬ್ಲ್ಯೂ 8 ರವರು ನನ್ನ ತಂದೆ. ಸಿಡಬ್ಲ್ಯೂ 9 ನನ್ನ ತಾಯಿ. ಸಿಡಬ್ಲ್ಯೂ 5 ನೂರಅಹಮ್ಮದ ರಸೂಲಸಾಬ ನನ್ನ ಸಂಬಂಧಿಕರು. ಸಿಡಬ್ಲ್ಯೂ 10 ಅಪ್ಸರ ಅಹಮ್ಮಿದ ಅಮರ ನನ್ನ ಮಾವ ಅಂದರೆ ನನ್ನ ತಾಯಿಯ ತಮ್ಮನಾಗಬೇಕು. ಸಿಡಬ್ಲ್ಯೂ 11 ನನ್ನ ಕಸಿನ್ ಗ್ರ್ಯಾಂಡಪಾದರ ಆಗಬೇಕು. ಸಿಡಬ್ಲ್ಯೂ 12 ಅಮೀರ ಅಮಜಾದ ಕುತುಬುದ್ದಿನ ನದಾಪ ನನ್ನ ಅಜ್ಜನಾಗಬೇಕು. ಸಿಡಬ್ಲ್ಯೂ 13 ಮೊನೊರೊಬಿ ನನ್ನ ಅಜ್ಜಿ. ಆರೋಪಿ 1 ನನ್ನ ಗಂಡ. ಆರೋಪಿ 2 ನನ್ನ ಅತ್ತೆ. ಆರೋಪಿ 3 ಇಸ್ಮಾಯಿಲ್ ಉಸಮಾನ ನದಾಪ ನನ್ನ ಮಾವನಾಗಬೇಕು ಅವರು ಮೇ ತಿಂಗಳಿನಲ್ಲಿ ತೀರಿಕೊಂಡಿರುತ್ತಾರೆ. ಆರೋಪಿ 4 ಸಲೀಂದ ಇಸ್ಮಾಯಲ್ ನದಾಪ ನನ್ನ ಮೈದುನ. ಆರೋಪಿ 5 ಇಬ್ರಾಹಿಂ ಸೈಪು ನದಾಪ ಹಾಗೂ ಆರೋಪಿ 6 ಬಂದೆನವಾಜ ಸೈಪು ನದಾಪ ನನ್ನ ಅತ್ತೆಯ ಸಹೋದರರು. ಆರೋಪಿ 7 ಲಾಡಲೇಸಾಬ ಅಲ್ಲಾಭಕ್ಷ ವಾಲಿಕರ ಆರೋಪಿಯ ಚಿಕ್ಕಮ್ಮನ ಗಂಡ.

2. ನನ್ನ ಮತ್ತು 1 ನೇ ಆರೋಪಿಯ ನಡುವೆ ದಿನಾಂಕ 06.06.2014 ರಂದು ಸೊಲ್ಲಾಪುರದಲ್ಲಿ ವಿವಾಹ ಆಗಿರುತ್ತದೆ. ಮುಸ್ಲಿಂ ಸಂಪ್ರದಾಯದಂತೆ ನಮ್ಮ ವಿವಾಹ ಆಗಿರುತ್ತದೆ. ಮದುವೆ ಸಮಯದಲ್ಲಿ 10 ತೊಲೆ ಬಂಗಾರ ಹಾಗೂ ಬಾಂಡೇ ಸಾಮಾನುಗಳನ್ನು ಹಾಗೂ ಎರಡು ಕಡೆ ಮದುವೆ ಖರ್ಚು ನಾವೇ ಭರಿಸಿರುತ್ತೇವೆ. ಮದುವೆ ಖರ್ಚು 10 ಲಕ್ಷ ರೂ ಆಗಿರುತ್ತದೆ. ಮದುವೆಯಾದ ದಿನವೇ ನನ್ನ ಗಂಡನ ಮನೆಗೆ ಬಂದಿರುತ್ತೇನೆ. ಸದರಿ ಸಮಯದಲ್ಲಿ ನನ್ನ ಗಂಡ ಪಿಡಿಓ ಆಗಿ ಉಡಕೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ನಾನು ಅವರೊಂದಿಗೆ 4

ವರ್ಷ ವೈವಾಹಿಕ ಜೀವನ ಮಾಡಿರುತ್ತೇನೆ. ಸದರಿ ವೈವಾಹಿಕ ಜೀವನದಿಂದ ಒಬ್ಬ ಗಂಡು ಮಗ ಒಬ್ಬಳು ಹೆಣ್ಣು ಮಗಳು ಜನಿಸಿರುತ್ತಾರೆ. ಗಂಡು ಮಗುವಿನ ಹೆಸರು ಅರಸ್ಲಾಂ ಹೆಣ್ಣು ಮಗುವಿನ ಹೆಸರು ಆಯತ್. ಬೈಲಹೊಂಗಲದ ವಿಧ್ಯಾನಗರದಲ್ಲಿ ರಮೇಶ ಕರಿಯಪ್ಪ ಚಲವಾದಿ ರವರ ಮನೆಯಲ್ಲಿ ಬಾಡಿಗೆಗೆ ಇದ್ದೇವು. ಆರೋಪಿ 1 ರವರ ಸ್ವಂತ ಊರು ಚಿಂಚೋಳ್ಳಿ, 3 ವರ್ಷಗಳವರೆಗೂ ನನ್ನ ಮತ್ತು ಆರೋಪಿ 1 ರವರ ಸಂಬಂಧ ಚೆನ್ನಾಗಿತ್ತು. ಜನೇವರಿ 2018 ರಿಂದ ನನಗೆ ತೊಂದರೆ ನೀಡಲು ಶುರು ಮಾಡಿದರು. ನನಗೆ ಸರಿಯಾಗಿ ಅಡುಗೆ ಮಾಡಲು ಬರುವುದಿಲ್ಲ, ಕೆಲಸ ಮಾಡಲು ಬರುವುದಿಲ್ಲ, ಸಣ್ಣಸಣ್ಣ ವಿಷಯಗಳಿಗೂ ಜಗಳ ಮಾಡುತ್ತಿದ್ದರು. ಮದುವೆಯಲ್ಲಿ ನೀವು ನೀಡಿದ ಹಣ ಸಾಕಾಗುವುದಿಲ್ಲ, ಇನ್ನು ಹೆಚ್ಚಿನ ಹಣವನ್ನು ತರಲು ಒತ್ತಾಯಿಸುತ್ತಿದ್ದರು. ಆರೋಪಿಗೆ ನನ್ನ ಅತ್ತೆ, ಮಾವ, ಮೈದುನ ಬಂದು ಹೇಳಿಕೊಡುತ್ತಿದ್ದರು.

ಎಪಿಪಿ ರವರು ಈ ಹಂತದಲ್ಲಿ ಮುಂದು ವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ.ದಿ.ನ್ಯಾ ಮತ್ತು ಪ್ರ.ದ.ನ್ಯಾ.ದಂ.ನ್ಯಾ.ಬೈಲಹೊಂಗಲ